ಇಂಗ್ಲಿಷ್ ಕಲಿತರೆ ಉತ್ತಮ ಉದ್ಯೋಗ ಸಿಗುತ್ತದೆ ಎನ್ನುವ ಭಾವನೆ ನಮ್ಮಲ್ಲಿ, ಅದರಲ್ಲೂ ಮುಖ್ಯವಾಗಿ ಈಗಿನ ಪೀಳಿಗೆಯವರಲ್ಲಿ ಮೂಡಿದೆ. ಇದಕ್ಕೆ ಪರಿಹಾರವೆಂದರೆ, ಎಲ್ಲರೂ ಅವರವರ ಮನೆಗಳಲ್ಲಿ ಮಾತೃಭಾಷೆಯಲ್ಲಿಯೇ ವ್ಯವಹರಿಸಬೇಕು ಮತ್ತು ಪ್ರಾದೇಶಿಕ ಭಾಷೆ ಯುವಜನರಿಗೆ ಉದ್ಯೋಗವನ್ನು ನೀಡುವಂತಾಗಬೇಕು. ಇಂಗ್ಲಿಷ್ ವ್ಯಾಮೋಹಕ್ಕೆ ಕಡಿವಾಣ ಬೀಳದಿದ್ದರೆ ಪ್ರಾದೇಶಿಕ ಭಾಷೆಗಳು ಸಂಕಷ್ಟವನ್ನು ಎದುರಿಸಬೇಕಾಗುತ್ತದೆ. ಇಂಗ್ಲಿಷ್ ಸೇರಿದಂತೆ ಇತರ ಭಾಷೆಗಳ ಕಲಿಕೆಯನ್ನು ನಾನು ವಿರೋಧಿಸುವುದಿಲ್ಲ. ಆದರೆ ಮಾತೃಭಾಷೆಯ ಮೇಲಿನ ಅಭಿಮಾನವನ್ನು ಯಾರೂ ಬಿಡಬಾರದು.

◆ **ಬಂಗಾಳಿ ಭಾಷೆಯೂ ಆತಂಕದ ದಿನಗಳನ್ನು ಎದುರಿಸುತ್ತಿದೆ ಅಂತ ನಿಮಗೆ ಅನ್ನಿಸುತ್ತಿದೆಯೇ?**

ಬಂಗಾಳಿ ಯುವಕ-ಯುವತಿಯರಲ್ಲಿ ಇಂಗ್ಲಿಷ್ ವ್ಯಾಮೋಹ ಅಧಿಕವಾಗುತ್ತಿರುವುದು ನಿಜ. ಆದರೆ ಸದ್ಯದ ಸ್ಥಿತಿಯಲ್ಲಿ ಬಂಗಾಳಿ ಭಾಷೆ ಆತಂಕವನ್ನು ಎದುರಿಸುತ್ತಿಲ್ಲ. ಬಂಗಾಳಿ ಪತ್ರಿಕೆಗಳು ಉತ್ತಮ ಪ್ರಸರಣ ಸಂಖ್ಯೆಯನ್ನು ಹೊಂದಿವೆ; ಪುಸ್ತಕಗಳೂ ಗಣನೀಯ ಪ್ರಮಾಣದಲ್ಲಿ ಪ್ರಕಟವಾಗುತ್ತಿವೆ; ಪುಸ್ತಕಗಳ ಮಾರಾಟವೂ ಚೆನ್ನಾಗಿಯೇ ಇದೆ; ಪ್ರಕಾಶಕರ ಸಂಖ್ಯೆಯೂ ಅಧಿಕವಾಗುತ್ತಿದೆ; ಯುವ ಲೇಖಕರೂ ಅಧಿಕ ಸಂಖ್ಯೆಯಲ್ಲಿ ಕಾಣಿಸುತ್ತಿದ್ದಾರೆ; ಅವರೂ ಅದ್ಭುತ ರೀತಿಯಲ್ಲಿ ಬರೆಯುತ್ತಿದ್ದಾರೆ... ಇವೆಲ್ಲವೂ ನನಗೆ ಹೆಮ್ಮೆಯ ವಿಷಯ.

ಕನ್ನಡದ ರೀತಿಯಲ್ಲಿಯೇ ಬಂಗಾಳಿ ಸಾಹಿತ್ಯ ವಲಯವೂ ರಾಷ್ಟ್ರಮಟ್ಟದಲ್ಲಿ ಮಾತ್ರವಲ್ಲ, ಜಾಗತಿಕ ಮಟ್ಟದಲ್ಲಿಯೂ ಅನೇಕ ವರ್ಷಗಳಿಂದ ಜನಪ್ರಿಯತೆಯನ್ನು ಗಳಿಸಿಕೊಂಡು, ಉಳಿಸಿಕೊಂಡು ಬಂದಿದೆ. ರವೀಂದ್ರನಾಥ ಟ್ಯಾಗೋರ್, ಬಲೈಚಂದ್ ಮುಖೋಪಾಧ್ಯಾಯ, ಮಹಾಶ್ವೇತಾದೇವಿ, ಬಂಕಿಮಚಂದ್ರ ಚಟರ್ಜಿ, ಮೈಖೇಲ್ ಮಧುಸೂದನ ದತ್, ರಾಜಶೇಖರ ಬಸು, ಶರತ್‌ಚಂದ್ರ ಚಟ್ಟೋಪಾಧ್ಯಾಯ, ವಿಭೂತಿಭೂಷಣ ಬಂದ್ಯೋಪಾಧ್ಯಾಯ, ಶರದಿಂದು ಬಂದ್ಯೋಪಾಧ್ಯಾಯ, ಸಮರೇಶ್ ಮಜುಮ್ದಾರ್, ನವೀನ್‌ಚಂದ್ರ ಸೇನ್, ನವನೀತ ಸೇನ್, ಲೀಲಾ ಮಜುಮ್ದಾರ್, ಅಲ್ ಮಹ್ಮದ್, ಹುಮಾಯೂನ್ ಆಝಾದ್, ಉತ್ಪಲ್ ದತ್... ಈ ಪಟ್ಟಿ ಮುಂದುವರಿಯುತ್ತದೆ. ಈಗಿನ ತಲೆಮಾರಿನವರು ಬಂಗಾಳಿ ಸಾಹಿತ್ಯ ಪರಂಪರೆಯನ್ನು ಮುಂದುವರಿಸಿಕೊಂಡು ಹೋಗುತ್ತಿದ್ದಾರೆ. ನನಗಂತೂ ಖುಷಿಯಿದೆ.

◆ **ನಿಮಗೆ ಯಾವ ರೀತಿಯ ಸಾಹಿತ್ಯ ಇಷ್ಟವಾಗುತ್ತದೆ? ಇತ್ತೀಚಿನ ಲೇಖಕರ ಬರವಣಿಗೆಗಳ ಬಗ್ಗೆ ನಿಮ್ಮ ಅಭಿಪ್ರಾಯವೇನು?**

ನಾನು ಬಿಡುವಿನ ಸಮಯದಲ್ಲಿ ಹೆಚ್ಚಾಗಿ ಓದುವುದು ಪತ್ತೇದಾರಿ ಕಾದಂಬರಿಗಳನ್ನು. ಫಿಲಿಪ್ ಪಾರ್ಲೋ, ಶೆರ್ಲಾಕ್ ಹೋಮ್ಸ್ ಮುಂತಾದವರ ಬರವಣಿಗೆ ನನಗೆ ತುಂಬಾ ಇಷ್ಟ. ಇವನ್ನು ಹೊರತುಪಡಿಸಿದರೆ ರವೀಂದ್ರನಾಥ ಟ್ಯಾಗೋರ್, ಬಂಕಿಮಚಂದ್ರ ಚಟರ್ಜಿ ಮುಂತಾದ ಪ್ರಸಿದ್ಧ ಬಂಗಾಳಿ ಲೇಖಕರ ಪುಸ್ತಕಗಳನ್ನು ಇಷ್ಟಪಟ್ಟು ಓದುತ್ತೇನೆ. ಟ್ಯಾಗೋರ್ ಮತ್ತು ಬಂಕಿಮಚಂದ್ರರ ಬರಹಗಳೇ ನನಗೆ ಸ್ಫೂರ್ತಿ ಎನ್ನುವುದರಲ್ಲಿ ಎರಡು ಮಾತಿಲ್ಲ. ಇವರಿಬ್ಬರ ಸಾಹಿತ್ಯದಿಂದ ನಾನು ತುಂಬಾ ಪ್ರಭಾವಿತನಾಗಿದ್ದೇನೆ. ನಾನು ಶಿಕ್ಷಕನಾಗಿ ವೃತ್ತಿಜೀವನ ಆರಂಭಿಸಿದವನು. ಸಹಜವಾಗಿಯೇ ಓದು ನನಗೆ ತುಂಬಾ ಇಷ್ಟ. ಅದಾದ ನಂತರ ಪತ್ರಿಕೋದ್ಯಮಕ್ಕೆ (ಆನಂದಬಾಝಾರ್ ಪತ್ರಿಕಾ) ಕಾಲಿರಿಸಿದೆ. ಅಲ್ಲಿಯೂ ಕೂಡ ಸಂಪಾದಕರು ನನ್ನನ್ನು ಸಾಹಿತ್ಯ ವಿಭಾಗಕ್ಕೆ ನಿಯೋಜಿಸಿದರು. ಅನೇಕ ಹಿರಿಯ-ಕಿರಿಯ ಲೇಖಕರ ಕಥೆ-ಕಾದಂಬರಿಗಳನ್ನು ಪತ್ರಕರ್ತನಾಗಿಯೂ ಓದಿದ್ದೇನೆ. ಬಂಗಾಳಿಯಲ್ಲಿ ಸಾಹಿತ್ಯ ಕೃಷಿ ಹಿಂದೆಯೂ ಚೆನ್ನಾಗಿತ್ತು; ಈಗಲೂ ಚೆನ್ನಾಗಿದೆ. ಯುವ ಲೇಖಕರ ಬರವಣಿಗೆಯಲ್ಲಿ ಹೊಸತನವನ್ನೂ ಕಾಣುತ್ತಿದ್ದೇನೆ. ನಮಗಿಂತಲೂ ಅವರು`ಅಪ್ಡೇಟ್' ಆಗಿರುತ್ತಾರೆ; ನೂತನ ತಂತ್ರಜ್ಞಾನಗಳ ಬಗ್ಗೆ ಚೆನ್ನಾಗಿ ತಿಳಿದುಕೊಂಡಿರುತ್ತಾರೆ. ಇವುಗಳನ್ನು ಅವರು ತಮ್ಮ ಕೃತಿಗಳಲ್ಲಿ ಅತ್ಯಂತ ಮಾರ್ಮಿಕವಾಗಿ, ಪ್ರಭಾವಶಾಲಿಯಾಗಿ ವ್ಯಕ್ತಪಡಿಸಬಲ್ಲರು. ಹಳೆಬೇರು, ಹೊಸ ಚಿಗುರು, ಜೊತೆಯಾಗಿ ಸಾಗಿದರೆ, ಸಾಹಿತ್ಯದ ಮರ ಸದಾ ಹಸಿರು. ●